ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬಾದಾಮಿ ತಾಲ್ಲೂಕಿನಲ್ಲಿ ವಿದ್ಯುತ್ತೀಕರಣಗೊಳಿಸಿದಂಥ ಹಳ್ಳಿಗಳ ಸಂಖ್ಯೆ ಸಿಸಿಳ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಇನ್ನು ೧೦–೧೫ ಹಳ್ಳಿಗಳಿಗೆ ಕಂಬಗಳನ್ನು ಹಾಕಿ ತಂತಿ ಎಳೆಯುದೇ ಹಾಗೆಯೇ ಇವೆ ; ಈ ಹಳ್ಳಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಇವರ ತಾಲ್ಲೂಕಿನಲ್ಲಿ ೧೫೬ ಹಳ್ಳಿಗಳಿದ್ದು ; ಅದರಲ್ಲಿ ೯ ಹಳ್ಳಿಗಳು ಅನ್‌ಇನ್‌ಹ್ಯಾಬಿಟೇಟೆಡ್ ವಿಲೇಜಸ್ ಎಂದು ಮಾಡಲಾಗಿದೆ. ೧೪೭ ಹಳ್ಳಿಗಳ ಪೈಕಿ ೧೩೪ ಹಳ್ಳಿಗಳಿಗೆ ವಿದ್ಯುತ್ತೀಕರಣ ಮುಗಿದಿದೆ. ಉಳಿದ ೧೩ ಹಳ್ಳಿಗಳು ಆರ್.ಇ.ಸಿ. ಸ್ಕೀಂ ಕೆಳಗೆ ಸೆಂಟ್ರಲ್ ಅಪ್ರೂವಲ್‌ಗೆ ಕಳುಹಿಸಲಾಗಿದೆ. ಅಪ್ರೂವಲ್ ಆದ ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದು ನಾಲ್ಕು ಹಳ್ಳಿಗಳಲ್ಲಿ ೨ ಹಳ್ಳಿಗಳನ್ನು ನಮ್ಮ ಎಲೆಕ್ಟ್ರಿಸಿಟಿ ಬೋರ್ಡ್ ಪ್ರೋಗ್ರಾಂನಲ್ಲಿ ಸೇರಿಸಲಾಗಿದೆ. ಒಟ್ಟಿನಲ್ಲಿ ಅವರ ತಾಲ್ಲೂಕು ಪುಣ್ಯ ಮಾಡಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—೧೩ಳಿ ಹಳ್ಳಿಗಳಲ್ಲಿ ಉಳಿದಂಥ ೧೦–೧೫ ಹಳ್ಳಿಗಳನ್ನು ನಾನು ತಿಳಿಸಿರುವುದು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಾನು ಆಗಲೇ ಹೇಳಿದ ಹಾಗೆ ೯ ಹಳ್ಳಿಗಳು ಅನ್‌ಇನ್‌ಹ್ಯಾಬಿಟೇಟೆಡ್ ಹಳ್ಳಿಗಳೆಂದು ಮಾಡಲಾಗಿದೆ. ಉಳಿದ ೬–೭ ಹಳ್ಳಿಗಳಿಗೆ ಕೆಲಸ ತೆಗೆದುಕೊಳ್ಳಲಾಗುವುದು.

Held over Question No. 223 on 22nd March 1979

re : Iglur Project Shimsha River.

ಶ್ರೀ ಜಿ. ಮಾದೇಗೌಡ.—ಇಗ್ಲೂರ್ ಯೋಜನೆಗೆ ಯಾವಾಗ ಸರ್ಕಾರದ ಆಜ್ಞೆ ಹೊರಟಿತು ? ಈಗಾಗಲೇ ಇದುವರೆವಿಗೂ ಖರ್ಚು ಮಾಡಿರತಕ್ಕ ಹಣ ಎಷ್ಟು ? ಯಾವಾಗ ಈ ಯೋಜನೆಯನ್ನು ಮುಗಿಸುತ್ತೀರಿ ?

† ಶ್ರೀ ಡಿ. ದೇವರಾಜ ಅರಸ್.—ಹೋದ ವರ್ಷ ಈ ಯೋಜನೆಯನ್ನು ಪ್ರಾರಂಭ ಮಾಡಿ ಸುಮಾರು ಒಂಬತ್ತುವರೆ ಲಕ್ಷ ರೂಪಾಯಿಗಳನ್ನು ಬಜ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಟೆಂಡರ್ ವಗೈರೆ ಕರೆದು ತೀರ್ಮಾನವಾಗಿದೆ ; ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಜಿ. ಮಾದೇಗೌಡ.—ಇಗ್ಲೂರು ಜಲಾಶಯಕ್ಕೆ ಶಿಂಷಾ ನದಿಯಿಂದ ಬರತಕ್ಕ ನೀರಿನ ಪ್ರಮಾಣ ಪೆಷ್ಟು ? ಎಷ್ಟು ಸಾವಿರ ಎಕರೆಗೆ ನೀರು ಒದಗಿಸುವುದಕ್ಕಾಗುತ್ತದೆ ? ಖರ್ಚಾಗಿ ಉಳಿಯುತಕ್ಕ ನೀರಿನ ಪ್ರಮಾಣ ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ನನ್ನ ಹತ್ತಿರ ಅಂಕಿ ಸಂಖ್ಯೆಗಳು ಇಲ್ಲ ; ಸುಮಾರು ೧೦,೦೦೦ ಎಕರೆಗೆ ನೀರು ಒದಗಿಸಬೇಕೆಂದು ಇದೆ.

ಶ್ರೀ ಜಿ. ಮಾದೇಗೌಡ.—ಇಗ್ಲೂರ್ ಹತ್ತಿರ ಬೇಕಾದಷ್ಟು ನೀರು ಇದೆ ; ಬಹಳಷ್ಟು ನೀರು ಪೋಲಾಗಿ ಕಾವೇರಿ ನದಿ ಸೇರಿ ಮದ್ರಾಸಿಗೆ ಹೋಗುತ್ತದೆ. ಬಲದಂಡೆ ಕಾಲುವೆಯನ್ನು ತೆಗೆದುಕೊಂಡರೆ ಪೋಲಾಗತಕ್ಕ ನೀರನ್ನು ಉಳಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ; ಇದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ರೀ ಜನರೇಟೆಡ್ ವಾಟರ್ ನ್ಯಾಚುರಲ್ ಆಗಿ ಫ್ಲೋ ಆಗುತ್ತದೆ. ಬಲದಂಡೆ ಕಾಲುವೆ ತೆಗೆದುಕೊಳ್ಳಬೇಕಾದರೆ ನೀರಿನ ಪ್ರಮಾಣ ನೋಡಿಕೊಂಡು ಮಾಡಬೇಕಾಗುತ್ತದೆ. ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಮೂರು ಸಾವಿರ ಎಕರೆ ಭತ್ತದ ಬೆಳೆಗೆ ನೀರು ಒದಗಿಸಬೇಕು ; ಸೆಮಿ ಡ್ರೈ ಕ್ರಾಪ್ಸ್‌ಗೆ ನೀರು ಒದಗಿಸಿದರೆ ನೀರನ್ನು ಉಳಿಸುವುದಕ್ಕೆ ಸಾಧ್ಯವಿದೆ. ೬ ಲಿಫ್ಟ್ ಇರಿಗೇಷನ್ ಮಾಡಬೇಕೂಂತ ಮಾಡಿದ್ದೇವೆ. ತಾವು ಹೇಳತಕ್ಕ ಅಂಶವನ್ನು ಕೂಡ ವಿಚಾರ ಮಾಡುತ್ತೇವೆ. ನೀರು ಜಾಸ್ತಿ ಸಿಕ್ಕುವುದಾದರೆ ನನ್ನ ಆಭ್ಯಂತರ ಏನೂ ಇಲ್ಲ. First of all, let me start the

work. I will also get it re-examined whether it is possible to cut off some water for this paddy. ಇವೊತ್ತಿನ ದಿವಸ ನಾವು ಭತ್ತಕ್ಕಾಗಿ ಹೆಚ್ಚಿಗೆ ಅವಲಂಬಿಸ ಬೇಕಾಗಿಲ್ಲ. ಹಿಪ್ಪನೇರಳೆ ಬೆಳೆಯುತಕ್ಕ ರೈತರಿಗೆ ನೀರು ಒದಗಿಸಿದರೂ ಕೂಡ ಸಂತೋಷಪಡುತ್ತಾರೆ.

ಶ್ರೀ ಜಿ. ಮಾದೇಗೌಡ.—ನೀರು ಯಥೇಚ್ಛವಾಗಿ ಹೋಗತಕ್ಕ ವಿಚಾರ ನಿಮ್ಮ ದಾಖಲೆಯಲ್ಲಿಯೇ ಇದೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ವಿಚಾರ ಮಾಡಿ ನೋಡೋಣ.

ಶ್ರೀ ಜಿ. ಮಾದೇಗೌಡ.—ಈ ಯೋಜನೆಯಿಂದ ಮುಳುಗಡೆಯಾಗತಕ್ಕ ಪ್ರದೇಶ ಎಷ್ಟು ? ಗ್ರಾಮಗಳು ಎಷ್ಟು?

ಶ್ರೀ ಡಿ. ದೇವರಾಜ ಅರಸ್.—ಮುಳುಗಡೆಯಾಗತಕ್ಕ ಪ್ರದೇಶ ಜಾಸ್ತಿ ಇಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ಅದು ನನ್ನ ಪಾರ್ಲಿಮೆಂಟರಿ ಕ್ಷೇತ್ರ ; ಬಹಳ ಕಡಿಮೆ ಖರ್ಚಿನಿಂದ ಈ ಯೋಜನೆಯಾಗುತ್ತದೆಂದು ಪರಿಣತರು ವರದಿ ಕೊಟ್ಟಿದ್ದಾರೆ ; ಕೆಲಸ ಪ್ರಾರಂಭ ಮಾಡುವುದಕ್ಕೆ ತೀರ್ಮಾನ ಮಾಡಿದ್ದೀರಿ ; ಇದರಿಂದ ೩ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ ; ಈ ಯೋಜನೆಯನ್ನು ಆದಷ್ಟು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ?

SRI D. DEVARAJ URS —Sir, one thing I want to assure the hon'ble Members concerning the House. Everybody knows my temperment, I want to use maximum water wherever it is possible As you are aware this project was lying there for years together. But now I have decided to take up this project. A scheme has been prepared and I assure that wherever it is possible, whatever the quantum of water is available I am prepared to utilise.

2-00 P.M.

Increasing Bed Strength in Hospital at Sagar

350. SRI L. T. THIMMAPPA HEGDE (Sagar) —Will the Minister for Health and Family Welfare be pleased to state :—

(*a*) whether it has come to the notice of the Government that the Sagar Taluk which is the centre of Malnad area has become a place of origin for many new diseases and that in the hospital at Sagar there are more number of inpatients than the number of beds provided for :

(*b*) if so, the bed strength of that hospital at present and the average number of inpatients visiting the hospital per month ;

(*c*) whether an estimate has been made for the number of beds to be increased with reference to the conditions prevelant in that place ;

(*d*) if so, the action taken in this regard ?